

ಡಾ.ವಿನೋದ ಛೆಬ್ಬಿ

ಇಬ್ಬರು ಒಂಟಿ ಹಿರಿಯರ ನಡುವೆ ಮದುವೆ–ದಾಂಪತ್ಯದ ಹಂಗಿಲ್ಲದ ಸ್ನೇಹಸಂಬಂಧ ಯಾಕಾಗಬಾರದು?

# 337: ಹೊಸ ದಾರಿ - 77

ಮಕ್ಕಳು ತಮ್ಮನ್ನು ಗೌರವದಿಂದ ಕಾಣಬೇಕೆಂದು ಬಯಸುವವರು ಅವರೆದುರು ಮುಕ್ತರಾಗುವುದು ಹೇಗೆನ್ನುವುದರ ಬಗೆಗೆ ಹೋದಸಲ ಮಾತಾಡುತ್ತಿದ್ದೆ. ಇಳಿವಯಸ್ಸಿನವರಿಗೆ ಆತ್ಮೀಯತೆಯನ್ನು ಕಂಡುಕೊಳ್ಳುವುದಕ್ಕೆ ಕುಟುಂಬದ ಹೊರತಾಗಿ ಬೇರೆ ಮೂಲಗಳಿಲ್ಲವೆ ಎಂದು ಯೋಚಿಸುತ್ತಿರುವಾಗ ಕೌತುಕಮಯ ಕಲ್ಪನೆಯೊಂದು ಮೊಳೆಯಿತು. ನಿಮ್ಮೊಡನೆ ಹಂಚಿಕೊಳ್ಳುತ್ತಿದ್ದೇನೆ.

ಒಮ್ಮೆ ಉದ್ಯಾನದಲ್ಲಿ ಇರುವಾಗ ವಯಸ್ಸಾದ ಗಂಡು ಹೆಣ್ಣುಗಳಿಬ್ಬರು ಬೆಂಚಿನಮೇಲೆ ಕುಳಿತು ಹರಟೆ ಹೊಡೆಯುತ್ತಿದ್ದುದನ್ನು ಗಮನಿಸಿದೆ. ಅವರ ಮಾತುಗಳಲ್ಲಿದ್ದ ಸ್ಪಷ್ಟತೆ, ವ್ಯಾವಹಾರಿಕತೆ, ಹಾಗೂ ಇಬ್ಬರ ನಡುವಿನ ಐದಡಿ ಅಂತರ – ಇದೆಲ್ಲ ನೋಡಿದರೆ ಅವರು ಗಂಡ ಹೆಂಡಿರಲ್ಲ, ಸಂಬಂಧಿಕರೂ ಅಲ್ಲ, ಬಹುಶಃ ಉದ್ಯಾನದಲ್ಲೇ ಪರಿಚಯವಾದವರು ಎನ್ನುವಂತಿತ್ತು. ಪ್ರತಿದಿನ ಅದೇ ಜಾಗದಲ್ಲಿ ಕುಳಿತು ಗಂಟೆಗಟ್ಟಲೆ ಹರಟೆ ಹೊಡೆಯುತ್ತ ಹೇಳಿದ್ದನ್ನೇ ಮತ್ತೆಮತ್ತೆ ಹೇಳಿಕೊಳ್ಳುತ್ತಿದ್ದವರ ಬಗೆಗೆ ಕುತೂಹಲವಾಯಿತು. ಮಾಹಿತಿಯ ವರ್ಗಾವಣೆಯಾಗಲೀ ಹಂಚಿಕೊಂಡು ಹಗುರವಾಗುವಂಥದ್ದಾಗಲೀ ಏನೂ ನಡೆಯುತ್ತಿಲ್ಲವೆಂದರೆ ಇವರಿಗೇನು ಸಿಗುತ್ತಿದೆ ಎಂದು ಒಳಮನದ ಆಟವನ್ನು ಗ್ರಹಿಸಲು ಹೋದಾಗ ಅರಿವಾಯಿತು: ಇಬ್ಬರೂ ಪರಸ್ಪರ ಸ್ನೇಹ ಬಯಸುತ್ತಿದ್ದಾರೆ! ಒಂದುವೇಳೆ ಗಂಡ–ಹೆಂಡತಿ ಆಗಿದ್ದರೆ ಹತ್ತಿರ (ಕೈಹಿಡಿದು) ಕುಳಿತು ಹೆಚ್ಚು ಮಾತಾಡದೆ ಪ್ರಕೃತಿಯನ್ನು ಸವಿಯುತ್ತಿದ್ದರು. ಹಾಗಿಲ್ಲದಿರುವುದರಿಂದ ದೂರ ಕುಳಿತರೂ ಗಟ್ಟಿಮಾತುಗಳ ಮೂಲಕ ಹತ್ತಿರವಾಗುತ್ತಿದ್ದಾರೆ. ಅಯ್ಯೋ ಪಾಪ ಎನಿಸಿತು. ಗಂಡ–ಹೆಂಡತಿ ಅಲ್ಲವೆಂದ ಮಾತ್ರಕ್ಕೆ ಇವರೇಕೆ ಹತ್ತಿರ ಕುಳಿತುಕೊಳ್ಳಬಾರದು? ಯಾಕೆ ಕೈ ಹಿಡಿಯಬಾರದು? ಇವರ ಜಾಗದಲ್ಲಿ ಯುವಕ–ಯುವತಿಯರಿದ್ದರೆ ಅಲ್ಪಪರಿಚಿತರಾದರೂ ಮೈತಾಗುವಂತೆ ಕುಳಿತು, ಮುಟ್ಟಿತಟ್ಟಿ ನಗುತ್ತ, ಇಳಿದನಿಯಲ್ಲಿ ಸಂಭಾಷಿಸುತ್ತಿದ್ದರು. ಯಾವ ಅಡ್ಡಿ ಇಬ್ಬರನ್ನೂ ದೂರವಿಟ್ಟಿದೆ? ತಲೆ ಓಡಿ ಕಾರಣ ಕಂಡುಹಿಡಿಯಿತು: ಶರೀರ ಸಾಮೀಪ್ಯವು ಯುವಕಯುವತಿಯರಿಗೆ ಸಹಜವೆಂದು ನಾವೆಲ್ಲ ಪರಿಗಣಿಸುತ್ತೇವೆ; ಅದನ್ನೇ ವಯಸ್ಸಾದವರು ನಡೆಸಿದರೆ ಹುಬ್ಬೇರಿಸುತ್ತೇವೆ. ಯಾಕೆ? ಶರೀರ ಸಂಪರ್ಕವು ಕೇವಲ ಕಾಮತೃಪ್ತಿ ಹಾಗೂ ಸಂತಾನೋತ್ಪತ್ತಿಗಾಗಿ ಮಾತ್ರ; ಸಂತಾನೋತ್ಪತ್ತಿಯ ವಯಸ್ಸು ಮೀರಿದವರು ಜೊತೆಗೂಡುವ ಅಗತ್ಯವಿಲ್ಲ! ವಯಸ್ಸಾದವರು ಕಾಮಸುಖಕ್ಕೆ ಅರ್ಹತೆ ಕಳೆದುಕೊಂಡಿರುತ್ತಾರೆ ಎನ್ನುವ ಭಾವ ಸಾರ್ವತ್ರಿಕವಾಗಿದೆ. ಅವರು ಮಕ್ಕಳು–ಮೊಮ್ಮಕ್ಕಳನ್ನು ನೋಡಿಕೊಂಡಿದ್ದರೆ ಸಾಕು, ಸಾಂಗತ್ಯ ಬೇಕಿಲ್ಲ! ಅದಕ್ಕೆಂದೇ ಏರುವಯಸ್ಸಿನಲ್ಲಿ ಸಂಗಾತಿಯನ್ನು ಕಳೆದುಕೊಂಡಾಗ ಇನ್ನೊಂದು ಸಂಬಂಧವನ್ನು ಕಟ್ಟಿಕೊಳ್ಳುವಂತೆ ವಯಸ್ಸಾದವರಲ್ಲಿ ನಡೆಯುತ್ತಿಲ್ಲ. ಹಾಗೆ ನೋಡಿದರೆ, ತಾರುಣ್ಯಕ್ಕಿಂತ ವಯಸ್ಸಾದಂತೆ ಸಾವಿನ ಭಯ ಹೆಚ್ಚಾಗುವುದರಿಂದ ಒಂಟಿತನ ಕಾಡುತ್ತ ಸಾಂಗತ್ಯ ಅತ್ಯಗತ್ಯವಾಗುತ್ತದೆ.

ಇಳಿವಯಸ್ಸಿಗರಿಗೆ ಮರುಮದುವೆ ಮಾಡಿಸುವ ಪ್ರಯತ್ನ ನಡೆದಿದ್ದು ಕೇಳಿದ್ದೇನೆ. ನನ್ನ ಪ್ರಶ್ನೆ ಏನೆಂದರೆ, ಹೆಣ್ಣು ಗಂಡುಗಳ (ಮರು)ಬಾಂಧವ್ಯವು ಮದುವೆ, ದಾಂಪತ್ಯ ಎನ್ನುವ ಸಾಂಪ್ರದಾಯಿಕ ಚೌಕಟ್ಟಿನೊಳಗೇ ಏಕೆ ನಡೆಯಬೇಕು? ಬದ್ಧತೆ ಇಲ್ಲದೆ ಈಗಿನ ಯುವಕ–ಯುವತಿಯರಂತೆ ಬಾಯ್ ಫ್ರೆಂಡ್–ಗರ್ಲ್ ಫ್ರೆಂಡ್ ಯಾಕಾಗಬಾರದು? ವಯಸ್ಸಾದವರು ಈಗಷ್ಟೇ ಕುಟುಂಬ ವ್ಯವಸ್ಥೆಯ ಜಂಜಾಟದಿಂದ ಹೈರಾಣಾಗಿ ಹೊರಗೆ ಬಂದಿರುತ್ತಾರೆ. ದಾಂಪತ್ಯವು ಹೇರಿರುವ ಕಟ್ಟುಪಾಡುಗಳಿಂದ ಹೊರಬಂದು ಸ್ವತಂತ್ರರಾಗಿರುತ್ತಾರೆ. ಅವರಿಗೀಗ ಬೇಕಾಗಿರುವುದು ಹೊಣೆಯ ಗೊಡವೆಯಿಲ್ಲದ, ನಿರ್ವಹಿಸಲು ಹೆಣಗಬೇಕಿಲ್ಲದ, ಭವಿಷ್ಯದ ಬಗೆಗೆ ತಲೆ ಕೆಡಿಸದಿರುವ ಶುದ್ಧ ಸ್ನೇಹ–ಪ್ರೇಮವೇ ಹೊರತಾಗಿ ಇನ್ನೊಂದು ದಾಂಪತ್ಯವಲ್ಲ. ಮದುವೆಯಾದರೆ ಜೊತೆಜೊತೆಗೇ ಹೊಣೆಗಾರಿಕೆ, ಬದ್ಧತೆ, ಉಭಯತರ ಸಹನೆ–ಸ್ವೀಕೃತಿ, ಸಹ–ವಾಸದ ಸಂಕಷ್ಟ ಇತ್ಯಾದಿ ಹಿಂಬಾಲಿಸುತ್ತವೆ. ಅದಕ್ಕೇ ವಯಸ್ಸಾದವರು ಮರುಮದುವೆಗೆ ಹಿಂಜರಿಯುವುದು. ಬದಲಾಗಿ, ಕೇವಲ ಸ್ನೇಹಸಂಬಂಧವೆಂದರೆ? ಬಹುತೇಕ ಪ್ರತಿಯೊಬ್ಬರೂ ಥಟ್ಟೆಂದು ತಯಾರಾಗುತ್ತೇವೆ! ಅಷ್ಟೇಕೆ, ಹೊಸ ಸಾಂಗತ್ಯದ ಕಲ್ಪನೆಗೇ ಮೈಮನ ಪುಳಕಗೊಳ್ಳುತ್ತದೆ!

ಒಂಟಿ ಹಿರಿಯರು ನವಸಾಂಗತ್ಯದಲ್ಲಿ ಒಳಗೊಳ್ಳುವುದರಿಂದ ಕಿರಿಯರಿಗೂ ಲಾಭವಿದೆ. ಮಕ್ಕಳ ಮೇಲಿನ ಭಾವನಾತ್ಮಕ ಅವಲಂಬನೆ ಕಡಿಮೆಯಾಗಿ, ಅವರ ಸಿಡುಕು, ಹಟಮಾರಿತನ ಕಡಿಮೆಯಾಗಬಹುದು ಎನ್ನುವುದಕ್ಕೆ ಆಧಾರವಿದೆ. ಪ್ರೀತಿಯಲ್ಲಿರುವಾಗ ಶರೀರದಲ್ಲಿ ಹಿತಕರ ಭಾವನೆಯನ್ನು ಉಂಟುಮಾಡುವ ಹಾರ್ಮೋನ್ ಆಕ್ಸಿಟೋಸಿನ್ ಸ್ರವಿಸುತ್ತದೆ. ದೀರ್ಘಚುಂಬನದಲ್ಲಿ, ಕಾಮಕೂಟದ ಪರಾಕಾಷ್ಠೆಯಲ್ಲಿ ಇದರ ಉತ್ಪತ್ತಿ ಅತಿ ಹೆಚ್ಚಿರುತ್ತದೆ. ಮನಸ್ಸು ಮುದವಾದರೆ ಎಂಡಾರ್ಫಿನ್ ಉತ್ಪತ್ತಿಯಾಗಿ ಕಾಯಿಲೆಗಳ ನೋವು–ನರಳಿಕೆ ಆಶ್ಚರ್ಯವೆನಿಸುವಷ್ಟು ಕಡಿಮೆಯಾಗುತ್ತದೆ. ಪ್ರೀತಿಯು ಇನ್ನೊಂದು ಮೂಲದಿಂದ ಬರುವಾಗ ಕಿರಿಯರು ಕೇವಲ ನೆರವಿಗಿದ್ದರೆ ಸಾಕು ಎನ್ನುವ ಮನೋಭಾವ ಹಿರಿಯರಲ್ಲಿ ಹುಟ್ಟುತ್ತದೆ. ವೃದ್ಧಾಶ್ರಮದ ಅಗತ್ಯ ಕಡಿಮೆಯಾಗುತ್ತದೆ. ಪಾಶ್ಚಾತ್ಯರಲ್ಲಿ ಎಲ್ಲೆಡೆಯೂ ನಡೆಯುತ್ತಿರುವ ಇದು ನಮ್ಮಲ್ಲೂ ವ್ಯಾಪಕವಾಗಬೇಕಾಗಿದೆ.

ಹೋದಸಲ (ಕಂತು 336) ವಿಧುರ ವೃದ್ಧರೊಬ್ಬರು ಮಗನನ್ನು ಆಶ್ರಯಿಸಿದ್ದುದರ ಬಗೆಗೆ ಬರೆಯುತ್ತ, ಅವರೊಳಗಿನ ಒಂಟಿತನವು ಕಿರಿಕಿರಿಯ ರೂಪದಲ್ಲಿ ಹೊರಕಾಣುವುದರ ಬಗೆಗೆ ಹೇಳಿದ್ದೆ. ಇಂಥದ್ದೇ ಪ್ರಸಂಗ ನಿಮ್ಮ ಕುಟುಂಬದಲ್ಲಿದೆ ಎಂದುಕೊಳ್ಳಿ: ನಿಮ್ಮಲ್ಲಿ ಒಂಟಿಯಾದ ಅತ್ತೆಯೋ ತಾಯಿಯೋ ಇಳಿವಯಸ್ಸಿನಲ್ಲಿದ್ದಾಳೆ; ನೀವೆಷ್ಟೇ ಚೆನ್ನಾಗಿ ನೋಡಿಕೊಂಡರೂ ಅವಳ ಗೊಣಗಾಟ (ಅಥವಾ ನಿಮ್ಮನ್ನು ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳುವ ಆಕೆಯ ಹವಣಿಕೆ) ತಪ್ಪಿಲ್ಲ ಎಂದುಕೊಳ್ಳಿ. ನೀವೇನು ಯೋಚಿಸುತ್ತೀರಿ? ದೇವರೇ, ಏನು ಮಾಡಿದರೆ ಈಕೆಗೆ ಖುಷಿಯಾಗಬಹುದು? ಈಗ, ಈ ಇಬ್ಬರ ನಡುವೆ ಸಂಪರ್ಕ ಏರ್ಪಡಿಸಿದರೆ ಹೇಗಿರುತ್ತದೆ? ಛೆ, ಅಸಾಧ್ಯ ಎನ್ನುತ್ತೀರಾ?

ತಮ್ಮ ಒಂಟಿ ಹಿರಿಯರ ಸ್ನೇಹಿತೆ/ಸ್ನೇಹಿತನನ್ನು ಕಲ್ಪಿಸಿಕೊಳ್ಳುವುದೂ ಹೆಚ್ಚಿನವರಿಗೆ ಅಸಾಧ್ಯವೆನಿಸ್ತದೆ. (ನನ್ನ ಮಗಳು 'ಅಪ್ಪಾ, ನಾನು ನಿನ್ನನ್ನು ಲೈಂಗಿಕ ಜೀವಿ ಎಂದುಕೊಳ್ಳಲು 99% ಸಾಧ್ಯವಿಲ್ಲ' ಎಂದಿದ್ದು ನೆನಪಿದೆ.) ಆದರೆ, ನೀವೂ ಒಂದೊಮ್ಮೆ ಒಂಟಿಯಾಗಿದ್ದು ಸಾಂಗತ್ಯಕ್ಕಾಗಿ ಹಂಬಲಿಸುತ್ತಿದ್ದಿರಿ ಎನ್ನುವುದನ್ನು ಮರೆಯಬೇಡಿ. ಒಂದು ಕಾಲದಲ್ಲಿ ಹಿರಿಯರು ನಿಮಗೆ ಜೀವ ತುಂಬಿದ್ದಾರೆ; ಈಗ ನೀವು ಅವರಿಗೆ ಜೀವ ತುಂಬಿ. ಇನ್ನು, ಅವರು ಈ ವಯಸ್ಸಿನಲ್ಲಿ ಹೊಸಬರೊಂದಿಗೆ ಅತಿ ಹತ್ತಿರವಾಗುವುದನ್ನು ಹೇಗೆ ಸಹಿಸುವುದು? ಶ್ಶ್, ಸುಮ್ಮನಿರಿ. ಅದು ಅವರ ಖಾಸಗಿ ವಿಚಾರ. ಅಷ್ಟಾಗಿ ಅವರೂ ಮನುಷ್ಯರೇ... ಸ್ವಾರ್ಥಿಯಾಗಬೇಡಿ.

ಇನ್ನು, ನಿಮ್ಮ ಒಂಟಿ ಹಿರಿಯರಿಗೆ ಸಂಗಾತಿಯನ್ನು ಒದಗಿಸುವ ಕಾರ್ಯವನ್ನು ಹಲವು ರೀತಿಗಳಲ್ಲಿ ನೆರವೇರಿಸಬಹುದು:

ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ವಿಚಾರಿಸಿ: ಅವರ ಮನದಲ್ಲಿ ಯಾರಾದರೂ ಇದ್ದಾರೆಯೇ? ಮುಂಚೆ ಇದ್ದರೆ? ಹಂಚಿಕೊಳ್ಳಲು ಉತ್ತೇಜಿಸಿ. ಅವರ ಹಳೆಯ ಪ್ರೇಮಿಯಿದ್ದರೆ ಹುಡುಕಲು, ಸಂಪರ್ಕಿಸಲು ನೆರವು ನೀಡಿ. (ಪಾಕಿಸ್ತಾನಿ ಕಿರುಚಿತ್ರ **Daughter by Law** ನೋಡಿ; **YouTube**ನಲ್ಲಿದೆ.) ಮದುವೆ, ಗೃಹಪ್ರವೇಶದಂಥ ಸಂದರ್ಭಗಳಲ್ಲಿ ಬಂದ ಇಳಿವಯಸ್ಸಿಗರಿಗೆ ನಿಮ್ಮ ಒಂಟಿ ಹಿರಿಯರನ್ನು ಪರಿಚಯಿಸಿ. ಮುಂದೆ ಅವರಿಬ್ಬರ ಭೇಟಿಗೆ ಅನುವಾಗುವಂತೆ ಫೋನ್ ಸಂಪರ್ಕಕ್ಕೆ ನೆರವಾಗಿ.

ಸ್ನೇಹಿತರ ಒಂಟಿ ತಾಯಿ/ತಂದೆಗೆ ನಿಮ್ಮ ಒಂಟಿ ತಂದೆ/ತಾಯಿ ಪರಿಚಯಿಸಿ. ನಿಮ್ಮ ವಠಾರದ, ಓಣಿಯ ಹಿರಿಯರ ಸತ್ಕಾರ ಕೂಟವನ್ನು ಏರ್ಪಡಿಸಿ. ಎಲ್ಲರಿಗೂ ಎಲ್ಲರ ಪರಿಚಯವಾಗಲಿ. ನಿಮ್ಮ ಹಿರಿಯರು ಹಾಸಿಗೆ ಹಿಡಿದಿದ್ದರೆ ಹೊಸಬರನ್ನು ಪರಿಚಯಿಸಿ, ವಿಡಿಯೊ ಫೋನಿನಲ್ಲಿ ಕರೆ ಕಲ್ಪಿಸಿಕೊಡಿ. ಹೊಸ ಜನಸಂಪರ್ಕಕ್ಕಾಗಿ ಅಂತರ್ಜಾಲದ ಸಾಮಾಜಿಕ ತಾಣಗಳ ನೆರವು ಪಡೆದುಕೊಳ್ಳಿ.

ಪರಿಣಾಮ? ಮುಂದಾಗುವುದೆಲ್ಲ ರೋಚಕವೆ!

ಒಂಟಿ ಹಿರಿಯರೇ, ಈಗ ಹೇಳಿ: ನಿಮಗೂ ಸ್ನೇಹಸಂಪರ್ಕ ಬೇಕೆನ್ನಿಸುತ್ತದೆಯೆ? ನನಗೆ ಬರೆದುಕೊಳ್ಳಿ. ಎಲ್ಲರೂ ಸೇರಿ ಏನಾದರೂ ಹೊಸದಾಗಿ ಮಾಡೋಣ.

ಸಂಪರ್ಕಕ್ಕೆ: 8494933888; Email: vinod.chebbi@gmail.com